ಪ್ರೊಫೆಸರ್ ಇದ್ದಕ್ಕಿದ್ದಂತೆ ಸುಮ್ಮನಾದರು. ಅವರ ನೆನಪಿನ ಅಂಗಳದಲ್ಲಿ ಎದ್ದೆದ್ದು ಕುಣಿಯುವ ವಿಷಯವೂ ಮನುಷ್ಯ ಸಂಬಂಧಗಳು! ಹೌದಲ್ಲ... ಪ್ರೊಫೆಸರ್ ಒಂದಲ್ಲ, ಎರಡು ಮದುವೆಯಾದವರು. ಅವರು ಮಹಾರಸಿಕರೇನಲ್ಲ. ಹಾಗೆ ನೋಡಿದರೆ ನನ್ನಂತಹ ರಸಿಕರಲ್ಲ. ಆದರೂ ಹೆಣ್ಣಿನ ಬಗ್ಗೆ ಅವರಿಗಿರುವ ಕ್ಯೂರಿಯಾಸಿಟಿ ವಿಚಿತ್ರ. ಒಂದು ಸಂಬಂಧವನ್ನು ನೋಡಲು ಹೋದಾಗ ಆ ಮನೆಯಲ್ಲಿ ಇಬ್ಬರು ಟ್ವಿನ್ಸ್ ಹುಡುಗಿಯರಿದ್ದರು. ಕೆಲವು ಸೆಕೆಂಡುಗಳಿಗೆ ಒಬ್ಬಳು ಹಿರಿಯವಳು. ಅವಳನ್ನೇ ಮದುವೆಯಾಗಲು ಒಪ್ಪಿದರು. ಮದುವೆಯಾಗಿ ನಾಲ್ಕು ವರ್ಷ ಮಕ್ಕಳೇ ಆಗಲಿಲ್ಲ. ಆಗ ಪ್ರೊಫೆಸರ್ ಹೆಂಡ್ತಿಯೇ 'ನೀವು ನನ್ನ ತಂಗಿಯನ್ನೇ ಈ ಮನೆಗೆ ಎರಡನೆಯ ಹೆಂಡ್ತಿಯಾಗಿ ತಂದುಕೊಳ್ಳಿ. ನಾವಿಬ್ಬರೂ ಒಂದೇ ಕಡೆ ಒಂದೇ ಮನೆಯಲ್ಲಿ ಸಂತೋಷವಾಗಿ ಇರುತ್ತೇವೆ' ಅಂದದ್ದೇ ತಡ– ಎರಡನೇ ಮದುವೆಗೂ ಕೊರಳೊಡ್ಡಿದರು. ದುರದೃಷ್ಟಕ್ಕೆ ಎರಡನೆಯವಳಿಗೂ ಮಕ್ಕಳಾಗಲಿಲ್ಲ. ಎಲ್ಲರಿಗೂ ಉದ್ಯೋಗವಿದೆ; ಕಾರು –ಬಂಗಲೆಯಿದೆ; ಕೆ.ಜಿ ಗಟ್ಟಲೆ ಬಂಗಾರ –ಒಡವೆಗಳಿವೆ; ಕೆಲಸಕ್ಕೆ ಆಳು–ಕಾಳುಗಳು ಎಲ್ಲಾ ಇವೆ. ಆದರೆ ಪ್ರೊಫೆಸರ್ ಮನಸ್ಸಿಗೆ ನೆಮ್ಮದಿ, ಸಂತೋಷ, ಸುಖಗಳಿಲ್ಲ. ವಿಶೇಷವೆಂದರೆ, ಅವರು ಯಾವತ್ತೂ ಅವರ ಮನೆಯಲ್ಲಿ ಕುಡಿಯೋದೇ ಇಲ್ಲ. ಅದೇನಿದ್ದರೂ ನನ್ನ ಮನೆಯಲ್ಲಿ. ನಾನು ಅವರಿಗೋಸ್ಕರ– ಅವರ ಒತ್ತಾಯಕ್ಕೋಸ್ಕರ ಡ್ರಿಂಕ್ಸ್ ತಂದಿಟ್ಟಿರ್ತೀನಿ. ಆಶ್ಚರ್ಯವೆಂದರೆ, ಯಾವಾಗ ಅವರ ಹೆಂಡ್ತಿಯರು ಮನೆಯಲ್ಲಿ ಇರುವುದಿಲ್ಲವೋ ಅಂದು ನನ್ನ ಮನೆಯಲ್ಲಿ ಹಾಜರ್. ನನ್ನ ಮನೆಯಿಂದ ಒಂದು ಕಿಲೋ ಮೀಟರ್ ದೂರದಲ್ಲಿ ಅವರ ಮನೆ. ಪ್ರೊಫೆಸರ್ ಯಾವತ್ತೂ ಅಳತೆ ಮೀರಿ ಕುಡಿದಿಲ್ಲ –ಕುಡಿಯೋದಿಲ್ಲ. ದುಃಖಗಳನ್ನು ಮರೆಯಲು ಕುಡಿಯುವುದೂ ಇಲ್ಲ. ಅವರ ದಣಿದ ಮನಸ್ಸಿಗೆ ಸಣ್ಣ ರಿಲ್ಯಾಕ್ಸ್ ಬೇಕಿದ್ದಾಗ, ಹೆಂಡ್ತಿಯರಿಬ್ಬರನ್ನೂ ಸಾಗ ಹಾಕಿ ನನ್ನ ಮನೆಯತ್ತ ಧಾವಿಸಿ ಬರುತ್ತಾರೆ.

'ಸರ್, ವಿಷಯ...?' ಅವರ ಗಮನಸೆಳೆದೆ.

'ಓ... ಸ್ಸಾರಿ ಜಂಟಲ್‌ಮ್ಯಾನ್... ಅಂದ ಹಾಗೆ ವಿಷಯ ಮಹತ್ವದ್ದಾದರೂ ನಿನಗೆ ವೆರಿ ಸಿಂಪಲ್ ಆಗಿ ಸ್ಟಡಿ ಮಾಡಬಹುದು. ನೀನು ತಲೆಕೆಡಿಸಿಕೊಳ್ಳುವ ಅಗತ್ಯವೇ ಇಲ್ಲ. ಪ್ರಾಕ್ಟಿಕಲ್ ನೆಲೆಯಿಂದಲೇ ಫೀಲ್ಡ್ ವರ್ಕ್ ಮಾಡುತ್ತಲೇ ಅಧ್ಯಯನ ಮಾಡಬಹುದು...'

'ನೀವು ಹೇಳುತ್ತಿರುವ ವಿಷಯ...?'

'ಜನರು ಮತ್ತು ಭೂತ... ದೈವ್ವಗಳು! ಇದರ ಬಗ್ಗೆ ಸಂಶೋಧನೆ ಮಾಡಬೇಕು!'

ಒಂದು ಕ್ಷಣ ದಿಗ್ಭ್ರಾಂತನಾದೆ. ಪ್ರೊಫೆಸರ್‌ಗೆ ತಲೆ ಕೆಟ್ಟಿರಬೇಕೆನಿಸಿತು. ಕುಡಿದ ಅಮಲು ತಲೆಗೇರಿ ಮಾತನಾಡಿದರೋ ಎಂದೆನಿಸಿತು. ನಾನೆಂದೆ:

'ಸಾರ್, ನೀವು ಏನು ವಿಷಯ ಹೇಳ್ತಿದ್ದೀರಾ...? ಜನರೊಂದಿಗೆ ಬೆರೆಯಬಹುದು. ಆದರೆ ಭೂತ... ದೈವ್ವಗಳೊಂದಿಗೆ ಒಡನಾಟ ಬೆಳೆಸೋದು ಹೇಗೆ ಸಾಧ್ಯ? ಜನರು ಸುಮ್ಮನಿದ್ದರೂ ಭೂತ–ದೈವ್ವಗಳು ಸ್ಟಡಿ ಮಾಡೋಕೆ ಬಿಡುತ್ತವಾ? ನನ್ನ ಗತಿ ಏನಾಗಬೇಕು? ಅಯ್ಯೋ ಇದೆಲ್ಲಾ ಆಗೋ ಹೋಗೋ ವಿಷಯವಲ್ಲಾ ಸರ್!'

ಒಂದು ಕ್ಷಣ ಪ್ರೊಫೆಸರ್ ನನ್ನನ್ನು ಕೆಕ್ಕರಿಸಿ ನೋಡಿದರು. ನಾನು ಇನ್ನಷ್ಟು ಬೇಕೇ ಎಂದೆ, ಸಂಜ್ಞೆಯಿಂದ. ಪ್ರೊಫೆಸರ್ `ಬೇಕು' ಅಂದರು. ಈಗ ಸುರಿಯುವ ಕೊಡುವ ಕ್ರಿಯೆ ನನ್ನದಾಯಿತು. ಪುನಃ ಕುಡಿಯಲಾರಂಭಿಸಿದರು, ಕುಡಿದರು. ಎಂದಿಗಿಂತ ತುಸು ಹೆಚ್ಚೇ ಕುಡಿದರು. ಆದರೂ ನಿಶೆ ಸಿಕ್ಕಾಬಟ್ಟೆ ತಲೆಗೇರಲಿಲ್ಲ. ವಾಸ್ತವದ ಅರಿವು ಚೆನ್ನಾಗಿತ್ತು. ಹೇಳಲಾರಂಭಿಸಿದರು:

'ಅದೇ ವಿಷಯಕ್ಕೆ ಬರ್ತಿದ್ದೀನಿ... ಭೂತ, ದೈವ್ವಗಳ ಅಸ್ತಿತ್ವವನ್ನು ತಿಳಿಯಲು ಇಂದಿಗೂ ವಿಜ್ಞಾನಿಗಳೂ ಹಾತೊರೆಯುತ್ತಿದ್ದಾರೆ. ಎಷ್ಟೋ ಜನರು ಭೂತವನ್ನು ನೋಡಿದ್ದಾಗಿಯೂ, ದೈವ್ವವನ್ನು ಕಂಡದ್ದಾಗಿಯೂ ಹೇಳಿರುವುದು ನಿಜವೋ ಸುಳ್ಳೋ ಯಾರಿಗೂ ಗೊತ್ತಿಲ್ಲ. ಗಾಳಿ ಬೀಸದೆ ಎಲೆ ಅಲುಗಾಡುವುದಿಲ್ಲ ಮೈ ಡಿಯರ್ ಯಂಗ್ ಮ್ಯಾನ್! ನಿನ್ನ ತಲೆಯಲ್ಲಿಯೂ ಭೂತ ಇರುವ ಹಾಗಿದೆ... ದೈವ್ವ ಕಾಡುವ ಹಾಗಿದೆ. ಈ ವಿಚಾರದ ಸತ್ಯಾಸತ್ಯತೆಯನ್ನು ಪರೀಕ್ಷಿಸಲೆಂದೇ ನಿನಗೆ ಇದನ್ನು ಅಧ್ಯಯನ ಮಾಡಲು ಹೇಳಿದೆ...'

'ಏನು ಸಾರ್, ನಿಮಗೆ ಭೂತ– ದೈವ್ವಗಳ ಬಗ್ಗೆ ಬಹಳ ನಂಬಿಕೆ ಇರುವ ಹಾಗೆ ಕಾಣುತ್ತೆ...'

'ಹೌದು ಮ್ಯಾನ್. ನನ್ನ ಕುಟುಂಬದಲ್ಲಿ ಬಹಳಷ್ಟು ಮಂದಿ ಭೂತಕೋಲ ನಡೆಸುತ್ತಾ ಬಂದಿದ್ದಾರೆ. ಹಾಗೇ ದೈವ್ವ ಹಿಡಿದ ಕೆಲವು ಹೆಂಗಸರು– ಗಂಡಸರು ಅರೆಹುಚ್ಚರಾಗಿಯೋ ಪೂರ್ತಿ ಹುಚ್ಚರಾಗಿಯೋ ಸತ್ತದ್ದೂ ಇದೆ. ನಂಬಿಕೆಗಳು, ಸಂಪ್ರದಾಯಗಳು, ಕಟ್ಟುಪಾಡುಗಳು ಕೆಲವೊಮ್ಮೆ ಮೂಢನಂಬಿಕೆಗಳಾಗುವುದಿದೆ. ಆದರೆ ಅದೇ ಭೂತ–ದೈವ್ವಗಳ ಪ್ರಸಂಗ ಅಂಥವರ ಬದುಕಿನಲ್ಲಿ ಘಟಿಸಿದಾಗ, ಮಂತ್ರವಾದಿಗಳನ್ನು ಹುಡುಕಿಕೊಂಡು ಅದೇ ಜನರು ಕೇರಳದ ತುತ್ತತುದಿಯ ತನಕ ಓಡುತ್ತಾರೆ. ಇದು ವಿಜ್ಞಾನ ಯುಗ. ಎಲ್ಲವೂ ಡಿಜಿಟಲ್‌ಮಯ. ಆದರೂ ಭೂತ–ದೈವ್ವಗಳು ಇವೆಯೆಂದು ವಿಜ್ಞಾನಿಗಳೂ ಹೇಳುತ್ತಾ ಬಂದಿದ್ದಾರೆ. ಭೂತ–ದೈವ್ವಗಳ ನಿಜವಾದ ಅಸ್ತಿತ್ವ, ಅವುಗಳಿಗೂ ಇರಬಹುದಾದ ಪರಂಪರೆ ಎಲ್ಲವನ್ನೂ ತಿಳಿದುಕೊಳ್ಳಬೇಕಾದರೆ ಸಂಶೋಧನೆ –ಅಧ್ಯಯನ ಬೇಕಾಗುತ್ತದೆ. ಜನರು ನಂಬಿದಂತೆ ಭೂತ–ದೈವ್ವಗಳು ಭಯಾನಕವಲ್ಲ; ಮನುಷ್ಯರಷ್ಟು ಭ್ರಷ್ಟವೂ ಅಲ್ಲ! ಭೂತ–ದೈವ್ವಗಳಲ್ಲೂ ಮಾನವೀಯತೆಯ ಸೆಲೆಯಿದೆ; ಅವುಗಳಿಗೂ ಆತ್ಮವಿದೆ. ಮನುಷ್ಯರಿಗೆ ಸಾವಿದೆಯೇ ವಿನಾ ಅವರ ಆತ್ಮಕ್ಕೆ ಎಂದಿಗೂ ಸಾವಿಲ್ಲ. ಆತ್ಮ ಸಂಚಾರವಾಗುತ್ತಲೇ ಇರುತ್ತದೆ...' ಎಂದು ಇನ್ನೂ ಮುಂದುವರಿಸುತ್ತಿದ್ದರು. ನನಗೆ ಅಂತರಂಗದ ತುಡಿತವನ್ನು ಹತ್ತಿಕ್ಕಿಸಿಕೊಳ್ಳಲಾಗಲಿಲ್ಲ. ಹೇಳಿದೆ:

'ಸರ್, ನೀವು ಸೂಚಿಸುತ್ತಿರುವ ಭೂತ–ದೈವ್ವಗಳ ವಿಷಯ ಸಮರ್ಥನೀಯವೇ. ಆದರೆ ನನಗೆ ಕಾಲಾವಕಾಶ ಬೇಕು...'

'`ನಾನು ಒಂಥರ ತಲೆಮಾಂಸ ಇದ್ದಂತೆ. ಪದೇ ಪದೇ ತಲೆ ತಿನ್ನುವ ಜಾತಿ. ನನ್ನನ್ನು ಕಾಲೇಜಿನಲ್ಲಿ ವಿದ್ಯಾರ್ಥಿಗಳೆಲ್ಲ 'ತಲೆಮಾಂಸ' ಅಂತಲೇ ಅಡ್ಡ ಹೆಸರಿನಲ್ಲಿ ಕರೆಯುತ್ತಾ ವ್ಯಂಗ್ಯವಾಡುತ್ತಿದ್ದರು. ಯಾಕೆಂದರೆ, ಒಂದು ವಿಷಯ ನನ್ನ ತಲೆಗೆ ಹೊಕ್ಕಿತೆಂದರೆ, ಅದು ಮೂರ್ತರೂಪಕ್ಕಿಳಿಯುವವರೆಗೂ ಬಿಡುವ ಜಾಯಮಾನ ನನ್ನದಲ್ಲ... ನಿನಗೆ ನಾನು ಹೇಳಿದ್ದೆಲ್ಲವೂ ನನ್ನ ಕಲ್ಪನೆಯದ್ದಲ್ಲ. ನೀನೊಮ್ಮೆ ನನ್ನ ತಾಯಿ 'ತರವಾಡು' ಮನೆಗೆ ಬಂದಾಗ, ಭೂತ– ದೈವ್ವಗಳ ಅಸ್ತಿತ್ವ ಹಾಗೂ ಭೂತಾರಾಧನೆಗಳ ನಂಬಿಕೆಗಳಿಗಿರುವ ನಿದರ್ಶನಗಳನ್ನು ನಿನಗೆ ಪ್ರತ್ಯಕ್ಷ ತೋರಿಸುತ್ತೇನೆ... ನಿನ್ನ ಅಧ್ಯಯನಕ್ಕೆ ಪೂರಕವಾದ ಕೆಲವೊಂದು ದೃಶ್ಯಾವಳಿಗಳನ್ನೂ ನಿನಗೆ ನಾನು ಕೊಡಬಹುದು.... ನನ್ನ ಇಬ್ಬರು ಧರ್ಮಪತ್ನಿಯರೂ ಆ ಕುರಿತು ತುಂಬಾ ಕುತೂಹಲಿಗಳಾಗಿದ್ದಾರೆ. ನಿನಗೆ ಪಿಎಚ್ಡಿ ಮಾಡುವುದಕ್ಕೆ ಇದಕ್ಕಿಂತ ಒಳ್ಳೆಯ ಸಬ್ಜೆಕ್ಟ್ ಇಲ್ಲವೆಂದು ನನ್ನ ಭಾವನೆ...'

'ಸರಿ ಸಾರ್, ನಿಮ್ಮ ಇಚ್ಛೆಯೇ ನನ್ನದೂ...'

'ಜನರು ಮತ್ತು ಭೂತ–ದೈವ್ವಗಳ ಸಂಬಂಧಗಳ ಬೆನ್ನುಹತ್ತಿದಾಗ ಒಂದು ಅಪರಿಚಿತ ಲೋಕ ಅಥವಾ ಒಂದು ನಿಗೂಢ ಸಮಾಜ ಸ್ವರೂಪ ದರ್ಶನ ನಿನಗೆ ದಕ್ಕಬಹುದು. ಸೋ... ಯೂ ಥಿಂಕ್ ಆ್ಯಂಡ್ ಡಿಸೈಡ್... ಆಲ್ ದಿ ಬೆಸ್ಟ್' ಎಂದು ನನ್ನ ಬೆನ್ನು ತಟ್ಟುತ್ತಾ ಪ್ರೊಫೆಸರ್ ಎದ್ದು ನಿಂತರು.

★★★

## ತಲೆ: ಎರಡು

––––ಪ್ರೊಫೆಸರ್ ಮತ್ತು ನನ್ನ ನಡುವೆ ನಡೆದ ಲೋಕಾಭಿರಾಮ ಮಾತುಕತೆಗಳ ಗುಂಗಿನಲ್ಲೇ ಬಹಳ ಹೊತ್ತು ಮುಳುಗಿದ್ದೆ. ನಾನು ಭೂತ–ದೈವ್ವಗಳ ಬಗ್ಗೆ ಕೇಳಿದ್ದಕ್ಕೂ ಪ್ರೊಫೆಸರ್ ಹೇಳಿದ್ದಕ್ಕೂ ಪರಸ್ಪರ ವಿರೋಧವಿತ್ತು. ಭೂತಗಳ ಅಸ್ತಿತ್ವ, ದೈವ್ವಗಳ ಬಗ್ಗೆ ನಂಬಿಕೆ, ತಂತ್ರ– ಮಂತ್ರಗಳ ಬಗ್ಗೆ ಜನರ ಪ್ರತಿಕ್ರಿಯೆಗಳನ್ನು ಕೇಳುತ್ತಾ ಹೋದರೆ, ಅದನ್ನು ಕೇಳುತ್ತಲೇ ನಕ್ಕು ಬಿಡುತ್ತಾರೆ. ಅದರಲ್ಲೂ ಹೆಂಗಸರು ಬಿಲ್ಕುಲ್ ತಮ್ಮ ಭೂತಗಳ ಬಗ್ಗೆಯಾಗಲೀ, ದೈವ್ವಗಳ ಬಗ್ಗೆಯಾಗಲೀ ಯಾವುದೇ ಗುಟ್ಟುಗಳನ್ನು ಬಿಟ್ಟುಕೊಡಲು ಸಿದ್ಧರಿರುವುದಿಲ್ಲ. ಜನಸಾಮಾನ್ಯರಲ್ಲಿಯೇ ವಿಚಾರಿಸಲೆಂದು ಭೂತ– ಭವಿಷ್ಯಗಳನ್ನು ಕೆದಕಿದರೂ– ಕೆದಕದಿದ್ದರೂ ಮೂಢನಂಬಿಕೆಯಲ್ಲೇ ಬದುಕುವವರ ಸಂಖ್ಯೆಯೂ ಸಾಕಷ್ಟಿರುವುದರಿಂದ ನನ್ನ ಅಧ್ಯಯನಕ್ಕೆ ಜನರೇ ಪ್ರತ್ಯಕ್ಷ ಭೂತ–ದೈವ್ವಗಳಾದರೂ ಅಚ್ಚರಿಯಿಲ್ಲ. ಅಂತಹ ಅನುಭವ ಚಿಕ್ಕಂದಿನಲ್ಲಿ ನನಗೂ